ಇ) ಹಾಗಿದ್ದಲ್ಲಿ, ಲೋಕೋಪಯೋಗಿ ಹಾಗೂ ನೀರಾವರಿ ಇಲಾಖೆಯಲ್ಲಿ ಆರ್ಥಿಕ ವಿಕೇಂದ್ರೀಕರಣ ಮಾಡುವ ವಿಚಾರ ಸರಕಾರಕ್ಕೆ ಇದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು) —

ಅ) ಈಗಿರುವ ಆರ್ಥಿಕ ಅಧಿಕಾರದ ಆಜ್ಞೆಯಂತೆ ಕೆಲವು ಸೀಮಿತ ಆರ್ಥಿಕ ಅಧಿಕಾರಗಳನ್ನು ಕಾರ್ಯ ನಿರ್ವಾಹಕ ಅಭಯಂತರರಿಗೆ ನೀಡಿರುತ್ತದೆ, ಮತ್ತು ಅವನ್ನು ಕೆಲವು ಷರತ್ತಿನೊಳಗೊಂಡು ನಿರ್ವಹಿಸಬೇಕೆಂದಿದೆ.

ಆ) ರೂಪಾಯಿ ೧೦,೦೦೦-೦೦ ವರೆಗಿನ ಕೆಲಸಕ್ಕೆ ತಾಂತ್ರಿಕ ಮಂಜೂರಾತಿಯನ್ನು ನೀಡಲು ಉಪ-ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಅಭಯಂತರರಿಗೆ ಅಧಿಕಾರವನ್ನು ಸಂಬಂಧಪಟ್ಟ ಅಧೀಕ್ಷಕ ಅಭಿಯಂತರರವರ ಪೂರ್ವ ಅನುಮೋದನೆಯನ್ನು ಕಾರ್ಯ ಕ್ರಮಕ್ಕೆ ಪಡೆದು ನಿರ್ವಹಿಸಲು ನೀಡಿದೆ. ಹೆಚ್ಚಿನ ಅಧಿಕಾರವನ್ನು ಸಹಾಯಕ ಅಭಯಂತರರಿಗೆ ನೀಡದೇ ಇರುವುದರಿಂದ ಯಾವುದೇ ರೀತಿಯಿಂದಲೂ ಕೆಲಸಕ್ಕೆ ತೊಂದರೆಯಾಗಿರುವುದಿಲ್ಲ.

ಇ) ಇನ್ನು ಹೆಚ್ಚಿನ ಆರ್ಥಿಕ ವಿಕೇಂದ್ರೀಕರಣ ಮಾಡುವ ಪ್ರಸ್ತಾವನೆಯು ಸರಕಾರದ ಮುಂದೆ ಇಲ್ಲ,

ಶ್ರೀ ಜ್ಞಾನದೇವ ದೊಡ್ಡನೇಟಿಯವರು.— ಹಾಗಿದ್ದಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಗೆ ಎಷ್ಟು ರೂ.ಗಳ ಕೆಲಸಕ್ಕೆ ಸ್ವತಂತ್ರವಾಗಿ ತಾಂತ್ರಿಕ ಮಂಜೂರಾತಿ ನೀಡಲು ಅಧಿಕಾರ ಇದೆ.

ಶ್ರೀ ಹೆಚ್. ಡಿ. ದೇವೇಗೌಡ — ೧೦,೦೦೦ ರೂ.ಗಳವರೆಗೆ. ವಾರ್ಷಿಕ ಪ್ರೋಗ್ರಾಮನ್ನು ಮೊದಲು ಮಾಡಬೇಕು. ಸ್ಪೆಷಲ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರಿಗೆ ಕಳಿಸಿಕೊಡಬೇಕು. ಅವರು ಅದನ್ನು ಮಂಜೂರು ಮಾಡಿದ ಮೇಲೆ ಮೇಲಿನ ಮೊಬಲಗಿನ ಮಂಜೂರಾತಿ ಮಾಡಲು ಸಾಧ್ಯ.

ಶ್ರೀ ಕೂಡಲಸಂಗಮೇಶ್ವರ ದೇವಸ್ಥಾನದ ಮುಳುಗಡೆ

೧೬೩. ಶ್ರೀ ಶಿವಸಂಗಪ್ಪ ಶಿದ್ದಪ್ಪ ಕಡಪಟ್ಟಿ (ಹುನಗುಂದ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ನಾರಾಯಣಪುರದ ಬಳಿ ಕೃಷ್ಣಾ ನದಿಗೆ ಅಡ್ಡಲಾಗಿ ಆಣೆಕಟ್ಟನ್ನು ನಿರ್ಮಿಸಿರುವ ಶ್ರೀ ಕೂಡಲ ಸಂಗಮೇಶ್ವರ ದೇವಸ್ಥಾನ ಹಾಗೂ ಶ್ರೀ ಬಸವೇಶ್ವರರ ಐಕ್ಯ ಸ್ಥಳಗಳು ಮುಳುಗಡೆಯಾಗಲಿದ್ದು ಆ ಬಗ್ಗೆ ತ್ವರಿತ ಕ್ರಮಗಳನ್ನು ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ,

(ಆ) ಹಾಗಿದ್ದಲ್ಲಿ, ಆ ಬಗ್ಗೆ ತ್ವರಿತ ಕ್ರಮಗಳನ್ನು ಕೈಗೊಂಡು ಸದರಿ ಸ್ಥಳವನ್ನು ಯಾತ್ರಾಸ್ಥಳವನ್ನಾಗಿ ಯಾವಾಗ ಮಾಡಲಾಗುವುದು,

(ಇ) ಸದರೀ ಪ್ರದೇಶದ ಜನತೆಯು ನಾರಾಯಣಪುರ ಜಲಾಶಯಕ್ಕೆ 'ಬಸವ ಸಾಗರ' ಎಂದು ನಾಮಕರಣ ಮಾಡಲು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆಯೇ,

(ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಈ ಬಗ್ಗೆ ತ್ವರಿತ ಕ್ರಮಗಳನ್ನು ಕೈಗೊಳ್ಳಲಾಗಿದೆ,

(ಆ) ಈಗಾಗಲೇ ಕಾಮಗಾರಿಗಳು ನಡೆಯುತ್ತಿದೆ,

(ಇ) ಮನವಿ ಬಂದಿದೆ,

(ಈ) ಸರ್ಕಾರದ ಪರಿಶೀಲನೆಯಲ್ಲಿದೆ,

ಶ್ರೀ ಎಸ್. ಎಸ್. ಕಡಪಟ್ಟಿ.—ಸ್ವಾಮಿ, ತಾವು ಈ ಬಗ್ಗೆ ಕೈಗೊಳ್ಳುತ್ತಿರುವ ತೀವ್ರ ಕ್ರಮಗಳಾವುವು ?

ಶ್ರೀ ಹೆಚ್. ಡಿ. ದೇವೇಗೌಡ.—ಅಪ್ರೋಚ್ ರಸ್ತೆ ನಿರ್ಮಾಣ ಮಾಡಲು ೩೨ ಲಕ್ಷ ರೂ. ಮಂಜೂರಾಗಿದೆ. ಇದರ ಪೈಕಿ ೧೩,೯೦,೦೦೦ ರೂ.ಗಳನ್ನು ಖರ್ಚು ಮಾಡಲಾಗಿದೆ. ಫ್ಲೈ ಓವರ್ ಬ್ರಿಡ್ಜ್ ಗಳ ನಿರ್ಮಾಣಕ್ಕಾಗಿ ೧೧.೪೫ ಲಕ್ಷ.ರೂ. ಮಂಜೂರಾಗಿದೆ. ಮತ್ತು ಈ ಕೆಲಸವನ್ನು ಈಗಾಗಲೇ ತೆಗೆದುಕೊಳ್ಳಬೇಕೆಂದು ಸಿದ್ಧತೆ ನಡೆಸಿದ್ದೇವೆ. ಆರ್‌ಸಿಸಿ ಡ್ರೈವೆಲ್ ಮತ್ತು ಫೂಟ್ ಬ್ರಿಡ್ಜ್‌ಗೆ ೧೯ ಲಕ್ಷ ರೂ.ಗಳು ಮಂಜೂರಾಗಿದ್ದು ಸದ್ಯಕ್ಕೆ ತಾತ್ಕಾಲಿಕವಾಗಿ ೧೦,೪೦,೦೦೦ ರೂ.ಗಳನ್ನು ಖರ್ಚು ಮಾಡಿದ್ದೇವೆ. ಹೊಸ ನೀಲಾಂಬಿಕಾ ದೇವಸ್ಥಾನಕ್ಕಾಗಿ ೫ ಲಕ್ಷ ಅಂದಾಜು ಮಾಡಲಾಗಿದೆ. ಇದಕ್ಕೆ ಆಗಲೇ ಟೆಂಡರ್ ಕರೆಯಲಾಗಿದೆ ಕೆಲಸ ಶುರು ಮಾಡಬೇಕಾಗಿದೆ. ಮಹದೇಶ್ವರ ಟೆಂಪಲ್‌ಗೆ ೨ ಲಕ್ಷ ರೂ. ಕಲ್ಯಾಣ ಮಂಟಪಕ್ಕೆ ೯ ಲಕ್ಷ ರೂ. ಹೀಗೆ ೨೨ ಐಟಿಮ್‌ಗಳ ಕೆಲಸ ಆಗಬೇಕಾಗಿದೆ. ಸರ್ಕಾರ ತೀವ್ರವಾಗಿ ಕೆಲಸ ಮಾಡುತ್ತದೆ

ಶ್ರೀ ಎಸ್. ಎಸ್. ಕಡಪಟ್ಟಿ.—ಫ್ಲೈ ಓವರ್ ಕೆಲಸ ಹೇಗೆ ನಡೆದಿದೆ. ಅದರ ವಿವರವನ್ನು ಕೊಡಿ. ಚಾನಲ್ ಕೆಲಸ ಕೂಡ ನಡೆದಿಲ್ಲ. ಬ್ರಿಡ್ಜ್‌ಕಟ್ಟುವ ಮುಂಚೆಯೇ ಅದು ಮುರಿದಿದೆ. ಡ್ರೈನ್‌ನಲ್ಲಿ ನೀರು ಬಂದಿದೆ. ಐಕ್ಯ ಮಂಟಪದ ಬಗ್ಗೆ ಸರ್ಕಾರದ ಕ್ರಮವೇನು ?

ಶ್ರೀ ಹೆಚ್. ಡಿ. ದೇವೇಗೌಡ.—ಸ್ಥಳೀಯ ಮುಖಂಡರು, ಮಾಜಿ ಉಪರಾಷ್ಟ್ರಪತಿಗಳಾದ ಬಿ. ಡಿ. ಜತ್ತಿಯವರ ಮುಖಂಡತ್ವದಲ್ಲಿ ಈ ಡ್ರೈನೇಜ್ ಕೆಲಸದ ಪ್ರಸ್ತಾವ ನಡೆದಿರುವುದು. ನಾನಾ ಇದ್ಯಾವುದಕ್ಕೂ ಕಾರಣನಲ್ಲ. ಟೆಂಪಲ್ ಡಿಸ್‌ಮ್ಯಾಂಟಲ್ ಕೆಲಸ ಈಗ ೭೫ ಪರ್ಸೆಂಟ್ ಮುಗಿದಿದೆ. ಕೈಬಿಡಿ ಎಂದು ಜನ ಮನವಿ ಸಲ್ಲಿಸಿದ್ದಾರೆ. ನಾನು ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ. ಕೂಡಲಸಂಗಮೇಶ್ವರ ದೇವಸ್ಥಾನದ ಮುಳುಗಡೆ ಬಗ್ಗೆ ೨೧೪ ಲಕ್ಷ ರೂ.ಗಳ ಅಂದಾಜಿದೆ. ಈಗಾಗಲೇ ೫೫ ಲಕ್ಷ ಖರ್ಚಾಗಿದೆ. ಓವರ್‌ಬ್ರಿಡ್ಜ್ ನಿರ್ಮಾಣದಲ್ಲಿ ರೋಡ್ ಎಂಬ್ಯಾಂಕ್‌ಮಂಟ್ ಹಾಕಲಾಗಿದೆ. ಆರ್.ಸಿ.ಸಿ. ಫೌಂಡೇಷನ್ ಹಾಕಲಾಗಿದೆ. ಎರಡನೆಯದಾಗಿ ಫ್ಲಾಟ್ ಫಾರ್ಮ್. ಮೂಲವಿಗ್ರಹದಂತೆಯೇ ಇರುವಂತಹ ಇನ್ನೊಂದನ್ನು ಸ್ಥಾಪನೆ ಮಾಡಬೇಕೆಂಬ ಅಭಿಪ್ರಾಯವೂ ಇದೆ. ಹೈಪವರ್ ಕಮಿಟಿ ಸ್ಥಾಪನೆ ಮಾಡಿದ್ದೇವೆ. ಮುಖ್ಯ ಮಂತ್ರಿಗಳೇ ಅಧ್ಯಕ್ಷರು. ಅಲ್ಲಿನ ಹಿರಿಯರು, ಶಾಸಕರು ಸಂಬಂಧಪಟ್ಟವರನ್ನು ಕರೆಸಿ ನಿರ್ಣಯ ಮಾಡಬೇಕಾಗಿದೆ. ಒಂದು ಮೀಟಿಂಗ್ ಆಗಿದೆ. ಎಲ್ಲರಿಗೂ ಒಪ್ಪುವಂತಹ ನಿರ್ಣಯ ಮಾಡುತ್ತೇವೆ.

ಶ್ರೀ ಎಸ್. ಎಸ್. ಕಡಪಟ್ಟಿ.—ಐಕ್ಯಮಂಟಪಕ್ಕೆ ಹೋಗುವಾಗ ಬ್ರಿಡ್ಜ್‌ನ್ನು ಕಟ್ಟಿದ್ದಾರೆ. ಅದು ಆಗಲೇ ಕುಸಿದಿದೆ. ಉಪ ರಾಷ್ಟ್ರಪತಿಗಳನ್ನು ಈ ವಿಷಯಕ್ಕೆ ಎಳೆಯುವುದು ಬೇಡ. ಎಷ್ಟು ವರ್ಷದಲ್ಲಿ ಇದನ್ನು ಮುಗಿಸುತ್ತೀರಿ. ?

ಶ್ರೀ ಎಚ್. ಡಿ. ದೇವೇಗೌಡ.—ಮುಖ್ಯ ಮಂತ್ರಿಗಳೇ ಅಧ್ಯಕ್ಷರಾಗಿರುವ ಸಮಿತಿ ಎಷ್ಟು ಬೇಗ ತೀರ್ಮಾನ ತೆಗೆದುಕೊಳ್ಳುವುದೋ ಅಷ್ಟು ಬೇಗ ಮುಗಿಸಿಕೊಡುತ್ತೇವೆ.

ಶ್ರೀ ಚೆ. ಗು. ಬಿಳ್ಳದ್.—ಒಂದು ಉಪ ಪ್ರಶ್ನೆ ಕೇಳುತ್ತೇನೆ, ಅವಕಾಶ ಕೊಡಿ.

ಅಧ್ಯಕ್ಷರು —ತಾವು ಮಾನ್ಯ ಮಂತ್ರಿಯವರ ಕಚೇರಿಗೆ ಹೋಗಿ ಇದರ ಬಗ್ಗೆ ಚರ್ಚೆ ಮಾಡಿ.

ಶ್ರೀ ಎಸ್. ಎಸ್. ಕಡಪಟ್ಟಿ.—ಮಾನ್ಯ ಮಂತ್ರಿಗಳು ನಾಮಕರಣ ಮಾಡುವ ಬಗ್ಗೆ ಹೇಳಬೇಕು.

ಅಧ್ಯಕ್ಷರು.— ತಾವು ಅರ್ಧತಾಸಿನಲ್ಲಿ ಹೋಗಿ ನೋಟೀಟ್ ಕಳುಹಿಸಿ. ನಾನು ಅವಕಾಶ ಕೊಡುತ್ತೇನೆ, ದಯವಿಟ್ಟು ಕುಳಿತುಕೊಳ್ಳಬೇಕು.

ಕ್ರೇಸ್ಟ್‌ಗೇಟ್ ಏರಿಸಿ ಗಾಯಿತ್ರಿ ಜಲಾಶಯವನ್ನು ಎತ್ತರಿಸುವ ಬಗ್ಗೆ

೪೬೪. ಶ್ರೀ ಆರ್. ರಾಮಯ್ಯ (ಹಿರಿಯೂರು).—

(ಅ) ಚಿತ್ರದುರ್ಗ ಜಿಲ್ಲಾ ಹಿರಿಯೂರು ತಾಲ್ಲೂಕಿನಲ್ಲಿರುವ ಗಾಯಿತ್ರಿ ಜಲಾಶಯದ ಕಟ್ಟಡವನ್ನು ಐದು ಅಡಿಗಳಷ್ಟು ಎತ್ತರಿಸಿ ಕ್ರೆಸ್ಟ್ ಗೇಟ್ ಹಾಕಬೇಕೆಂಬುದರ ಬಗ್ಗೆ ಆ ಭಾಗದ ಜನರ ಬೇಡಿಕೆ ಇದೆಯೆ,